ಈ ದಿನ ದಿನಾಂಕಃ 14.10.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>**

ದಾವಾ ಆಸ್ತಿ ನನ್ನ ತಾತನಿಂದ ಬಂದಿರುತ್ತದೆ. ನನ್ನ ತಾತನಿಗೆ 3 ಜನ ಮಕ್ಕಳು. ನನ್ನ ತಂದೆ, ರಾಧಮ್ಮ ಹಾಗೂ ಹುಲಿಯಮ್ಮ. ದಾವಾ ಆಸ್ತಿ ನನ್ನ ತಾತನ ಮರಣದ ನಂತರ ಪೌತಿ ಆಧಾರದ ಮೇರೆಗೆ ನನ್ನ ತಂದೆ ಹಾಗೂ ಇಬ್ಬರು ಅತ್ತೆಯರಿಗೆ ಬಂದಿರುತ್ತದೆ. ನನ್ನ ಅಜ್ಜನ ಹೆಸರು ರಂಗಪ್ಪ ಎಂದರೆ ಸರಿ. ನನ್ನ ಅಜ್ಜನಿಗೆ ಚೌಡಮ್ಮ ಹಾಗೂ ಸಿದ್ದಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಸಿದ್ದಮ್ಮ ಈಗಲೂ ಜೀವಂತ ಇದ್ದಾರೆ ಎಂದರೆ ಸರಿ. ನನ್ನ ತಂದೆಗೆ ಕುಮಾರಿ ಹಾಗೂ ಹೇಮಾವತಿ ಇಬ್ಬರು ಹೆಂಡತಿಯರು ಎಂದರೆ ಸರಿ. ನನ್ನ ಅಜ್ಜನ ಮರಣದ ನಂತರ ಚೌಡಮ್ಮ ಹಾಗೂ ಸಿದ್ದಮ್ಮನವರ ನಡುವೆ ಯಾವುದೇ ಆಸ್ತಿ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಹಾಗೂ ಅತ್ತೆಯಂದಿರ ನಡುವೆ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನ್ನ ಅಜ್ಜಿ ಹಾಗೂ ಅತ್ತೆಯರಿಗೆ ಸಮಪಾಲು ಇರುತ್ತದೆ ಎಂದರೆ ಸರಿ. ಸಿದ್ದಮ್ಮ ಹಾಗೂ ನನ್ನ ಇಬ್ಬರು ಅತ್ತೆಯವರನ್ನು ಪ್ರಸ್ತುತ ದಾವೆ ಪಕ್ಷಗಾರರಾಗಿ ಸೇರ್ಪಡಿಸಿರುವುದಿಲ್ಲ ಎಂದರೆ ಸರಿ.

2. ನನ್ನ ಅತ್ತೆ ಹುಲಿಯಮ್ಮ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಚನ್ನಗಿರಿ, ಅಸಲು ದಾವೆ ಸಂ. 242/2024 ರಂತೆ ಪಾಲು ವಿಭಾಗ ಕೋರಿ ನಮ್ಮ ವಿರುದ್ದ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಮಗೆ ಹಾಜರಾಗುವಂತೆ ಸಮನ್ಸ್ ಬಂದಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಹಾಜರಾಗಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ, ಅಜ್ಜಿ ಹಾಗೂ ಅತ್ತೆಯಂದಿಗೆ ತಲಾ ಒಂದು ಭಾಗ ಎಂದು ತೀರ್ಪಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗೆ ಅಂತಿಮ ಡಿಕ್ರಿ ಮಾಡಿಕೊಂಡು ಎಫ್ ಡಿ ಪಿ ನಂ. 21/2025 ರಂತೆ ದಾವೆ ಸಲ್ಲಿಸಿದಾಗ ಸಮನ್ಸ್ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆಯ ಸಮನ್ಸ್ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಗೂ ನಾನು ಹಾಜರಾಗಿರುವುದಿಲ್ಲ ಎಂದರೆ ಸರಿ.ಪ್ರತಿವಾದಿಗಳು ಮ್ಮ ತಕರಾರಿನಲ್ಲಿ ಅಗತ್ಯ ಪಕ್ಷಗಾರರನ್ನು ಪಕ್ಷಗಾರರಾಗಿ ಮಾಡಿಲ್ಲದಿರುವ ವಿಚಾರವನ್ನು ನಾನು ಕೇಳಿ

ತಿಳಿದು ಕೊಂಡಿರುತ್ತೇನೆ. ಸದರಿ ದಾವಾ ಆಸ್ತಿ ಮೂಲತಃ ರಂಗಪ್ಪನಿಗೆ ಸೇರಿದ ಸ್ವತ್ತಾಗಿದ್ದು ಆತನ ಹೆಂಡತಿ ಸಿದ್ದಮ್ಮ ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ಪಕ್ಷಗಾರರಾಗಿ ಮಾಡದಿರುವುದರಿಂದ ನಾನು ಸಮಪಾಲು ಪಡೆಯಲು ಅನರ್ಹಳು ಎಂದರೆ ಸರಿಯಲ್ಲ ಹಾಗಾಗಿ ಕಾನೂನಡಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ  ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ  ಎಂದರೆ ಸರಿಯಲ್ಲ.

**ಮರು ವಿಚಾರಣೆಃ  ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.